ಜಿಜ್ಞಾಸೆಯ ಕವಿ ಮಾತ್ರ ಎನ್ನುವ ಸ್ಥಿರಚಿತ್ರವು ಅನೇಕರ ಮನಸ್ಸಿನಲ್ಲಿದೆ. ವಾಸ್ತವವೆಂದರೆ, ಅವರ ಅತ್ಯುತ್ತಮ ಪದ್ಯಗಳು ತಂದೆ, ತಾಯಿ, ಅಣ್ಣ, ತಮ್ಮ, ಕುಟುಂಬ ಇವುಗಳ ಬಗ್ಗೆ ಇವೆ. ಅವು ತೀವ್ರವಾದ ಭಾವನಾತ್ಮಕ ನೆಲೆಯಲ್ಲಿ ಓದುಗರಿಗೆ ಸಂವಹನ ಮಾಡುತ್ತವೆ. ಆದರೂ ಈ ವೈಯಕ್ತಿಕ ಅನುಭವದ ಮೂಲಕ ವಿಶ್ವಾತ್ಮಕ ಚಿಂತನೆಯ ಕಡೆಗೆ ಅವು ದುಡಿಯುತ್ತವೆ.

ಈ ಲೇಖನದ ಉದ್ದೇಶವೆಂದರೆ, ವಿಶ್ವಾತ್ಮಕ ನೆಲೆಗಳ ಹಿಂದಿರುವ ತಾತ್ವಿಕತೆಯ ಬಗ್ಗೆ ಕೆಲವು ಟಿಪ್ಪಣಿಗಳನ್ನು ಮಾಡುವುದಾಗಿದೆ. ಇತ್ತೀಚೆಗೆ ಪ್ರಕಟವಾಗಿರುವ 'ಗಂಗಾಧರ ಚಿತ್ತಾಲ: ಎಪ್ಪತ್ತೆರಡು ಕವಿತೆಗಳು' ಕೃತಿಯಲ್ಲಿ ಚಿತ್ತಾಲರ ಕಾವ್ಯದ ಬಗೆಗೆ ಬಂದಿರುವ ವಿಮರ್ಶಾ ಲೇಖನಗಳೂ ಇವೆ. ಈ ಕೃತಿ ಚಿತ್ತಾಲರ ಕಾವ್ಯವನ್ನು ಆ ಕಾವ್ಯದ ಬಗೆಗಿನ ಪ್ರಬುದ್ಧ ವಿಮರ್ಶೆಯನ್ನು ಒಟ್ಟಿಗೆ ಒದಗಿಸುತ್ತದೆ. ವಿಶೇಷವೆಂದರೆ, ಕಾವ್ಯವು 180 ಪುಟಗಳಲ್ಲಿ ಬಂದರೆ, ವಿಮರ್ಶೆಯು 193 ಪುಟಗಳಷ್ಟು ಇದೆ. ಒಬ್ಬ ಶ್ರೇಷ್ಠ ಕವಿಯ ಕುರಿತ ಈ ವಿಮರ್ಶೆಯು ಕನ್ನಡ ವಿಮರ್ಶೆಯ ಮೌಲಿಕತೆಗೆ ದ್ಯೋತಕವಾಗಿದೆ. ನಾನು ಈ ವಿಮರ್ಶೆ–ಓದನ್ನು ಈ ಲೇಖನದಲ್ಲಿ ಬಳಸಿಕೊಂಡಿದ್ದೇನೆ ಎನ್ನುವುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಮನುಷ್ಯ ಅಸ್ತಿತ್ವದ ಬಗೆಗಿನ ಚಿತ್ತಾಲರ ತಾತ್ವಿಕತೆಯನ್ನು ಶಂಕರ ಮೊಕಾಶಿ ಪುಣೇಕರ್ ಅವರು 'ಮಾನವವಾದ'ವೆಂದು ಗುರುತಿಸುತ್ತಾರೆ. ('ಗಂಗಾಧರ ಚಿತ್ತಾಲರ ದುಃಖಗೀತೆ ಮತ್ತು ಮಾನವವಾದದ ಕೆಲವು ಮೌಲಿಕ ಸಮಸ್ಯೆಗಳು'). ಅವರ ಪ್ರಕಾರ ಮಾನವವಾದ(humanism)ದ ಬಹಿರಂಗ ಪುರಸ್ಕೃತರಾಗಿದ್ದವರು ಚಿತ್ತಾಲರು, ಮತ್ತು ಅವರು ಆ ತಾತ್ವಿಕತೆಯ ತೀವ್ರ ಪ್ರತಿನಿಧಿಯೂ ಆಗಿದ್ದರು. ಈ ತಾತ್ವಿಕತೆಯು ಮನುಷ್ಯನನ್ನು ಅಸ್ತಿತ್ವದ ಕೇಂದ್ರವೆಂದು ನಂಬುತ್ತದೆ. ಅವರ ಧೀಶಕ್ತಿ, ಕ್ರಿಯಾಶೀಲತೆ ಹಾಗೂ ಕರ್ತೃತ್ವವನ್ನು ಒಪ್ಪಿಕೊಳ್ಳುತ್ತದೆ. ಈ ತಾತ್ವಿಕತೆಯು ಕನ್ನಡ ಕವಿಗಳ ಮೇಲೆ ಪ್ರಭಾವ ಬೀರಿದರೂ ಚಿತ್ತಾಲರು ಮಾತ್ರ ಕನ್ನಡದ ಪ್ರಮುಖ ಕವಿಗಳು ಮಾಡಿದಂತೆ ಅನುಭಾವ, ದೈವವಾದ ಇವುಗಳಿಗೆ ಮೊರೆ ಹೋಗಲಿಲ್ಲ. ಹೀಗಾಗಿ ಭೀಕರವಾದ ನೋವಿನ ಅನುಭವಗಳ ಮೂಲಕ ಇವುಗಳಿಗೆ ಕಾರಣವೇನು ಎನ್ನುವ ಆತಂಕದ ಪ್ರಶ್ನೆಗಳನ್ನು ಅವರು ಕೇಳಿದರೂ ಅದಕ್ಕೆ ಪರಿಹಾರ ಸೂಚಿಸಲಾರರು. ಇದು ಸಂಗ್ರಹವಾಗಿ ಮೊಕಾಶಿಯವರ ವಾದವಾಗಿದೆ. ಅವರ ಗಮನವಿರುವುದು ಮಾನವವಾದದ ಸೀಮಿತತೆಯ ಬಗ್ಗೆ. ಚಿತ್ತಾಲರ ಕಾವ್ಯದ ಬಗ್ಗೆ ಮೊಕಾಶಿಯವರಿಗೆ ಅತ್ಯಂತ ಗೌರವವಿದೆ. ಕುತೂಹಲಕಾರಿಯಾದ ಅವರ ವಾದದ ಬಗೆಗಿನ ನನ್ನ ಭಿನ್ನಾಭಿಪ್ರಾಯವನ್ನು ಚಿತ್ತಾಲರ ಕಾವ್ಯದ ಓದಿನ ಮೂಲಕ ಮಂಡಿಸಲು ಪ್ರಯತ್ನ ಮಾಡುತ್ತೇನೆ.

'ವಿಧಿ' ಎನ್ನುವ ಕವನದ ಮೊದಲ ನುಡಿಯನ್ನು 1945ರಲ್ಲಿ ಚಿತ್ತಾಲರು ಬರೆದು, ಎರಡನೇ ನುಡಿಯನ್ನು 1960ರ ಹೊತ್ತಿಗೆ ಬರೆದರು ಎನ್ನುವ ಕುತೂಹಲಕರ ಸಂಗತಿಯನ್ನು ಗೌರೀಶ್ ಕಾಯ್ಕಿಣಿಯವರು ಪ್ರಸ್ತಾಪಿಸುತ್ತಾರೆ. ಮೊದಲ ನುಡಿಯಲ್ಲಿ ಮನುಷ್ಯನು ಸ್ವತಂತ್ರ; ಸ್ವಾಯತ್ತತೆ, ಕರ್ತೃತ್ವವಿರುವ ಆತ್ಮವಿಶ್ವಾಸ ಅವನಲ್ಲಿದೆ. ವಿಧಿಯೇ ಎಲ್ಲವನ್ನೂ ನಿಯಂತ್ರಿಸುತ್ತದೆ ಎನ್ನುವುದರ ಬಗ್ಗೆ ಅವನ ತೀವ್ರವಾದ ವಿರೋಧವಿದೆ.

ನಾನೇ ನನ್ನ ವಿಧಾತ. ಆದ ವಜ್ರಾಘಾತ–
ಕುಟುಗೀತು ನನ್ನ ಮುಂಗೈಯ ಕಸುವು?
................
................
ಈ ಬಾಳು ವಿಧಿವಶವು ನಾವಿಲ್ಲಿ ಬರಿ ಕಸವು
ಎಂದು ಗೋಣೆಳೆಸಿ ಗೋಳಿಡುವ ಪ್ರಾಣಿ
ನಿನ್ನ ಬಲಹೀನತೆಗೆ ವಿಧಿಯೆಂಬ ಹೆಸರಿಟ್ಟೆ
ಮರೆತೆ ನೀನೆಂಥ ತಾರರನ್ನು ತ್ರಾಣಿ
ಕೈಲಾಗದವರ ಕನವರಿಕೆ ವಿಧಿಯ ವಿಲಾಪ
ದೈವವೆಂಬುದು ಭೀರುಮನದ ಭೂತ

ಆದರೆ, ಎರಡನೆಯ ನುಡಿಯಲ್ಲಿ ಇದಕ್ಕೆ ತದ್ವಿರುದ್ಧವಾದ ಧೋರಣೆ ಇದೆ.

ತತ್ತರಿಸುವ ಕೈಯು ಇಗೋ, ನೆತ್ತರೊಡೆದ
ಮೈಯು ಇಗೋ
ವಿಧಿಯ ವಿಕಟ ವಿದ್ಧ ಹತಿಗೆ ಬೇಕೆ ಬೇರೆ ಸಾಕ್ಷಿ?
ಇದು ನಿಗೂಢ ವಿಲಯಂಕರ, ನಮ್ಮಳವಿನ
ಆಚೆಯ ಬಲ
ಅಡ್ಡಬಂದರೇನು ಸಾಕು ಆಘಾತಿಸುವ ಶಕ್ತಿ.